ಕೃಷಿ ಇಲಾಖೆ ಜೊತೆ ರೇಷ್ಮೆ ಇಲಾಖೆ ವಿಲೀನ

267(580); ಶ್ರೀ ಗೋಪಾಲಯ್ಯ ಕೆ. (ಮಹಾಲಕ್ಷ್ಮಿ ಲೇಔಟ್)

ಅ) ಕೃಷಿ ಇಲಾಖೆ ಜೊತೆ ರೇಷ್ಮೆ ಇಲಾಖೆಯನ್ನು ವಿಲೀನಗೊಳಿಸಲು ಸರ್ಕಾರ ನಿರ್ಧರಿಸಿದೇಯೇ?

ಆ) ಹಾಗಿದ್ದಲ್ಲಿ, ಕಾರಣಗಳೇನು?

ಇ) ಇದರಿಂದ ರೇಷ್ಮೆ ಕೃಷಿಗೆ ಹಿನ್ನಡೆಯಾಗುವುದಿಲ್ಲವೇ?

ಈ) ಇದಕ್ಕೆ ರೇಷ್ಮೆ ಬೆಳಗಾರರು ವಿರೋಧ ವ್ಯಕ್ತಪಡಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಉ) ಬಂದಿದ್ದಲ್ಲಿ, ಸರ್ಕಾರ ಈ ನಿರ್ಧಾರವನ್ನು ಕೈಬಿಡುತ್ತದೆಯೇ?

ಕೃಷಿ ರಾಜ್ಯ ಸಚಿವರು (ಕೃಷ್ಣ ಭೈರೇಗೌಡ)

ಅ) ಇದುವರೆವಿಗೂ ಕೃಷಿ ಇಲಾಖೆಯಲ್ಲಿ ರೇಷ್ಮೆ ಇಲಾಖೆಯನ್ನು ವಿಲೀನ ಮಾಡಿರುವುದಿಲ್ಲ.

ಆ) ಅನ್ವಯಿಸುವುದಿಲ್ಲ.

ಇ) ಅನ್ವಯಿಸುವುದಿಲ್ಲ.

ಈ) ಅನ್ವಯಿಸುವುದಿಲ್ಲ.

ಉ) ಅನ್ವಯಿಸುವುದಿಲ್ಲ.

ಕಳಪೆ ಕಾಮಗಾರಿ

268(547); ಶ್ರೀ ಗುರು ಪಾಟೀಲ ಶಿರವಾಳ (ಶಹಾಪುರ)

ಅ) ಬೀದರ್‌ನಿಂದ ಶ್ರೀರಂಗಪಟ್ಟಣಕ್ಕೆ ಹೋಗುವ ರಾಜ್ಯ ಹೆದ್ದಾರಿಯಿಂದ ಸಗರ ಗ್ರಾಮಕ್ಕೆ ಮತ್ತು ಶಾರದಹಳ್ಳಿ ಹೋಗುವ ರಸ್ತೆ ಸುಧಾರಣೆ

ಕಾಮಗಾರಿ ಕಳಪೆ ಮಟ್ಟದಿಂದ ಕೂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬೀದರ್‌ನಿಂದ ಶ್ರೀರಂಗಪಟ್ಟಣ ರಾಜ್ಯ ಹೆದ್ದಾರಿಯಿಂದ ಸಗರ ಮತ್ತು ಶಾರದಹಳ್ಳಿ ರಸ್ತೆಯ ಸುಧಾರಣೆ ಕಾಮಗಾರಿಯ ಟೆಂಡರ್ ಮೊತ್ತವೆಷ್ಟು; ಗುತ್ತಿಗೆದಾರರಿಗೆ ಪಾವತಿಸಲಾದ ಮೊತ್ತವೆಷ್ಟು;

ಇ) ಈ ರಸ್ತೆಯನ್ನು ಪುನರ್ ನಿರ್ಮಾಣ ಮಾಡುವ ಕುರಿತು ಸರ್ಕಾರದ ಮುಂದಿನ ಕ್ರಮವೇನು;

ಈ) ಕಳಪೆ ಮಟ್ಟದಿಂದ ಕೂಡಿರುವ ಕಾಮಗಾರಿಯನ್ನು ನಿರ್ವಹಿಸಿರುವ ಗುತ್ತಿಗೆದಾರರ ವಿರುದ್ಧ ಸರ್ಕಾರದ ಮುಂದಿನ ಕ್ರಮವೇನು?

ಡಾ॥ ಹೆಚ್.ಸಿ. ಮಹದೇವಪ್ಪ (ಮಾನ್ಯ ಲೋಕೋಪಯೋಗಿ ಸಚಿವರು)

ಅ) ಬಂದಿರುವುದಿಲ್ಲ.

ಆ) ಬೀದರ್‌ನಿಂದ ಶ್ರೀರಂಗಪಟ್ಟಣಕ್ಕೆ ಹೋಗುವ ರಾಜ್ಯ ಹೆದ್ದಾರಿಯಿಂದ ಸಗರ ಗ್ರಾಮಕ್ಕೆ ಮತ್ತು ಶಾರದಹಳ್ಳಿ ಹೋಗುವ ರಸ್ತೆಯ ಸುಧಾರಣೆ ಕಾಮಗಾರಿಯು 2010–11ನೇ ಸಾಲಿನ ಅಪೆಂಡಿಕ್ಸ್–ಇ ಲೆಕ್ಕ ಶೀರ್ಷಿಕೆ 5054–ಓಆರ್‌ಎಫ್ ಅಡಿಯಲ್ಲಿ ` 200.00 ಲಕ್ಷ ಅಂದಾಜು ಮೊತ್ತಕ್ಕೆ ಮಂಜೂರಾತಿ ಹೊಂದಿದೆ. ಸದರಿ ರಸ್ತೆಯ ಕಾಮಗಾರಿಯನ್ನು ಟೆಂಡರ್ ಆಧಾರದ ಮೇಲೆ ಶ್ರೀ ಗಿರಿಯಪ್ಪಗೌಡ ಪೋಲಿಸ್‌ಪಾಟೀಲ, ಗುತ್ತಿಗೆದಾರರು, ಇವರಿಗೆ ` 160,42,303.56 (2010–11)ನೇ ಸಾಲಿನ ಚಾಲ್ತಿ ದರಗಳ ಮೇಲೆ ಶೇಕಡಾ 15.00 ರಷ್ಟು ಕಡಿಮೆ) ಮೊತ್ತಕ್ಕೆ ವಹಿಸಲಾಗಿದೆ. ಇಲ್ಲಿಯವರೆಗೆ ` 84,02,775.00 ಗಳನ್ನು ಗುತ್ತಿಗೆದಾರರಿಗೆ ಪಾವತಿಸಲಾಗಿದ್ದು, ` 52,27,124.00 ಬಾಕಿ ಬಿಲ್ಲು ಉಳಿದಿರುತ್ತದೆ. ಒಟ್ಟಾರೆ 21.20 ಕಿ.ಮೀ. ಉದ್ದವಿರುವ ಈ ರಸ್ತೆಯಲ್ಲಿ, 8.50 ಕಿ.ಮೀ. ನವೀಕರಣ ಹಾಗೂ 10.80 ಕಿ.ಮೀ. ಆಗಲೀಕರಣ

ಕಾಮಗಾರಿ ಒಳಗೊಂಡಿದೆ. ಇದರಲ್ಲಿ 2 ಕಿ.ಮೀ. ಡಾಂಬರೀಕರಣ ಮಾತ್ರ ಬಾಕಿ ಇರುತ್ತದೆ.

ಇ) ಉದ್ಭವಿಸುವುದಿಲ್ಲ

ಈ) ಉದ್ಭವಿಸುವುದಿಲ್ಲ

ರಾಜ್ಯದಲ್ಲಿರುವ ತೋಟಗಾರಿಕಾ ಇಲಾಖೆಯ ಫಾರಂಗಳ ಅಭಿವೃದ್ಧಿ

272(542); ಶ್ರೀ ಹ್ಯಾರೀಸ್ ಎನ್.ಎ. (ಶಾಂತಿನಗರ)

ಅ) ರಾಜ್ಯದಲ್ಲಿರುವ ತೋಟಗಾರಿಕೆ ಇಲಾಖೆಯ ಫಾರಂಗಳ ಜಿಲ್ಲಾವಾರು ಸಂಖ್ಯೆ ಮತ್ತು ಅವುಗಳ ವಿಸ್ತೀರ್ಣ ಪ್ರಮಾಣದ ವಿವರಗಳನ್ನು ಒದಗಿಸುವುದು;

ಆ) ಸಾರ್ವಜನಿಕ ಮತ್ತು ಖಾಸಗಿ (ಪಿಪಿಪಿ) ಮಾದರಿಯಲ್ಲಿ ಅಭಿವೃದ್ಧಿಪಡಿಸುವ ಹಿಂದಿನ ಸರಕಾರದ ಯೋಜನೆಯು ಜಾರಿಗೊಳಿಸಲಾಗಿರುವ ಅಭಿವೃದ್ಧಿ ಯೋಜನೆಗಳ ರೂಪರೇಷೆಗಳ ವಿವರಗಳೇನು;

ಇ) ಸದರಿ ಫಾರಂಗಳಲ್ಲಿ ಅಭಿವೃದ್ಧಿ ಪಡಿಸಲಾಗುತ್ತಿರುವ ತೋಟಗಾರಿಕೆ ಚಟುವಟಿಕೆಗಳ ಕುರಿತಾದ ವಿವರಗಳೇನು; ಸದರಿ ತೋಟಗಾರಿಕೆ ಜಮೀನನ್ನು ಅನ್ಯ ಕಾರ್ಯಗಳಿಗೆ ಬಳಕೆಯಾಗದಂತೆ ಖಾಯಂ ಕಾನೂನು ನಿರ್ಬಂಧನೆಗಳನ್ನು ವಿಧಿಸುವಲ್ಲಿ ಸರ್ಕಾರದ ಕ್ರಮಗಳೇನು?

ಡಾ॥ ಶಾಮನೂರು ಶಿವಶಂಕರಪ್ಪ (ಮಾನ್ಯ ಕೃಷಿ ಮಾರುಕಟ್ಟೆ ಮತ್ತು ತೋಟಗಾರಿಕೆ ಸಚಿವರು)

ಅ) ರಾಜ್ಯದಲ್ಲಿರುವ ತೋಟಗಾರಿಕೆ ಇಲಾಖೆಯ ಫಾರಂಗಳ ಜಿಲ್ಲಾವಾರು ಸಂಖ್ಯೆ ಮತ್ತು ಅವುಗಳ ವಿಸ್ತೀರ್ಣದ ವಿವರಗಳು ಈ ಕೆಳಕಂಡಂತೆ ನೀಡಲಾಗಿದೆ.